ಎನ್‌ಇಟಿ, ಕೆಎಸ್‌ಇಟಿ ಪರೀಕ್ಷೆಗಳ ಮಾಹಿತಿ ಮತ್ತು ತರಬೇತಿ ಕಾರ್ಯಕ್ರಮ । ಪ್ರೊ. ಎಸ್. ಗೋವಿಂದ ಪ್ರಭು

# ಮಕ್ಕಳ ಉತ್ತಮ ಭವಿಷ್ಯ ರೂಪಿಸುವಲ್ಲಿ ಅಧ್ಯಾಪಕರ ಪ್ರಮುಖ ಪಾತ್ರ



■ ಎರಡು ದಿನಗಳ ಈ ತರಬೇತಿ ಶಿಬಿರದಲ್ಲಿ ವಿದ್ಯಾರ್ಥಿಗಳು ಭಾಗಿ

**ಕಾರ್ಕಳ:** ಕಾರ್ಕಳದ ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯುಎಸಿ, ಪಿ.ಜಿ. ಸ್ಟಡೀಸ್ ಸೆಂಟರ್, ಕ್ಯಾರಿಯಲ್ ಮತ್ತು ಕೌನ್ಸಲಿಂಗ್ ಸೆಲ್ ಮತ್ತು ಪ್ಲೇಸ್‌ಮೆಂಟ್ ಸೆಲ್‌ಗಳ ಸಂಯುಕ್ತ ಆಶ್ರಯದಲ್ಲಿ ಎನ್‌ಇಟಿ/ಕೆಎಸ್‌ಇಟಿ ಪರೀಕ್ಷೆಗಳ ಕುರಿತು ಮಾಹಿತಿ ಮತ್ತು ತರಬೇತಿ ಕಾರ್ಯಕ್ರಮವು ಭಾನುವಾರ ಮತ್ತು ಸೋಮವಾರ ನಡೆಯಿತು.

ಶ್ರೀ ಭುವನೇಂದ್ರ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಪ್ರೊ. ಎಸ್. ಗೋವಿಂದ ಪ್ರಭು ಉದ್ಘಾಟಿಸಿ, ಅಧ್ಯಾಪಕ ವೃತ್ತಿಯ ಹಿರಿಮೆಯನ್ನು ಎತ್ತಿ ಹಿಡಿದು, ಈ ತರಬೇತಿಯ ಸಂಪೂರ್ಣ ಸದ್ಬಳಕೆ ಮಾಡಿಕೊಂಡು ಅಧ್ಯಾಪಕ ವೃತ್ತಿ ಕೈಗೊಂಡು ಮಕ್ಕಳ ಉತ್ತಮ ಭವಿಷ್ಯ ರೂಪಿಸುವ ಪವಿತ್ರ ಕಾರ್ಯದಲ್ಲಿ ಭಾಗಿಗಳಾಗುವಂತಾಗಲಿ ಎಂದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀ ವರ್ಮ ಅಜ್ರಿ ಎಂ. ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಕೋಟ ಪಡುಕೆರೆಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ. ಮನೋಹರ್ ಉಪ್ಪುಂದ, ಪ್ರೊ. ಪ್ರಶಾಂತ್ ನೀಲಾವರ, ಹಳೆಯಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ. ಅಬ್ದುಲ್ ರಜಾಕ್, ಹೆಬ್ರಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ. ಪ್ರದೀಪ್ ಆನಂದ್ ಶೆಟ್ಟಿ ಮತ್ತು ಹಿರಿಯಡ್ಕದ ಪ್ರೊ. ಪ್ರತಾಪಚಂದ್ರ ಭಾಗವಹಿಸಿ ತರಬೇತಿ ನೀಡಿದರು.

ಎರಡು ದಿನಗಳ ಈ ತರಬೇತಿಯಲ್ಲಿ ಕಾಲೇಜಿನ ಪೂರ್ವ ವಿದ್ಯಾರ್ಥಿಗಳು ಹಾಗೂ ಇತರ ಕಾಲೇಜಿನ ಉಪನ್ಯಾಸಕರ ಸಹಿತ ಸುಮಾರು 70 ಜನ ಪಾಲ್ಗೊಂಡರು. ಕಾಲೇಜಿನ ಉಪನ್ಯಾಸಕರಾದ ಯೋಗೇಶ್ ಡಿ.ಎಚ್, ಕೃಷ್ಣಮೂರ್ತಿ ವೈದ್ಯ, ಗಣೇಶ್, ನವೀನ್, ಕಚೇರಿ ಸಿಬ್ಬಂದಿಗಳು ಮತ್ತಿತರರು ಉಪಸ್ಥಿತರಿದ್ದರು. ವಿದ್ಯಾಧರ್ ಹೆಗ್ಡೆ ಸ್ವಾಗತಿಸಿದರು. ಅಮೃತಾ ಭಟ್ ಮತ್ತು ಶ್ರೀಶ ಕಾರ್ಯಕ್ರಮ ನಿರೂಪಿಸಿದರು. ಐಕ್ಯುಎಸಿ ಸಂಚಾಲಕಿ ಜ್ಯೋತಿ ಎಲ್. ಜೆ. ಪ್ರಾಸ್ತಾವಿಕವಾಗಿ ಮಾತನಾಡಿದರು. ಮಂಜುನಾಥ್ ವಂದಿಸಿದರು.